1. ಜಸ್ಟೀಸ್ ಸದಾಶಿವ ಆಯೋಗದ ಬಗ್ಗೆ ಹೇಳಿಕೆ ನೀಡುವ ಬಗ್ಗೆ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅಧ್ಯಕ್ಷರೆ, ನಿನ್ನೆ ಸದಾಶಿವ ಆಯೋಗದ ವಿಚಾರದಲ್ಲಿ ನಡೆದಂತಹ ಘಟನೆ ಬಗ್ಗೆ ಸರಿಯಾದ ಮಾಹಿತಿಯನ್ನು ಮಾನ್ಯ ಗೃಹ ಸಚಿವರು ಸದನಕ್ಕೆ ನೀಡಿಲ್ಲ. ನಿನ್ನೆ ಜಾಸ್ತಿ ಗಲಾಟೆಯಾಗಿದೆ. ದಯಮಾಡಿ ಅದರ ಬಗ್ಗೆ ಸದನಕ್ಕೆ statement ವೊಂದನ್ನು ಮಾಡಿಸಬೇಕು. ಸುಮಾರು ಅಮಾಯಕರನ್ನು ಘಟನೆ ಸಂಬಂಧ ಬಂಧಿಸಲಾಗಿದೆ. ಗಲಾಟೆಯಲ್ಲಿ ಭಾಗವಹಿಸದಿರತಕ್ಕಂಥ ಅಮಾಯಕರನ್ನು ಮತ್ತು ಆ ಜಾತಿಗೆ ಸಂಬಂಧಪಡದಿರತಕ್ಕಂಥ ಅಮಾಯಕರನ್ನು ಜೈಲಿಗೆ ಹಾಕಿದ್ದಾರೆ. ನಿನ್ನೆ ರಾತ್ರಿ ಸನ್ಮಾನ್ಯ ರೇವಣ್ಣನವರು ಮತ್ತು ನಾವು ಜೈಲಿಗೆ ಹೋಗಿ ಅವರ ಜೊತೆಗೆ ಮಾತನಾಡಿದೆವು. ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹ ಸಚಿವರ ಜೊತೆಗೆ ಮಾತನಾಡಿದ ನಂತರ ಅವರನ್ನು ಬಿಡುಗಡೆಗೊಳಿಸಿದರು. ಆದರೆ ಅವರ ಮೇಲೆ ಕೇಸ್ ರಿಜಿಸ್ಟರ್ ಮಾಡ ಲಾಗಿದೆ. ದಯಮಾಡಿ ಅಮಾಯಕರ ವಿರುದ್ಧ ಹಾಕಿರತಕ್ಕ ಕೇಸ್ ವಾಪಸ್ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಮಾನ್ಯ ಗೃಹ ಸಚಿವರು ಬರಲಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಇದು ಬಹಳ important ವಿಷಯ ವಾಗಿದೆ. ಅಮಾಯಕರ ವಿರುದ್ಧ ಕೇಸ್ ಹಾಕಲಾಗಿದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪ ಮುಖ್ಯಮಂತ್ರಿಗಳೇ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಹೇಳಿಕೆಯೊಂದನ್ನು ಕೊಡಿಸಲಾಗುವುದು ಎಂದು ಒಪ್ಪಿಕೊಂಡಿದ್ದರು.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ದಯಮಾಡಿ ಮಾನ್ಯ ಗೃಹ ಸಚಿವರನ್ನು ಕರೆಸಿ. ಅಮಾಯಕರ ವಿರುದ್ಧ ಹಾಕಿರತಕ್ಕ ಕೇಸ್ ಅನ್ನು ವಾಪಸ್ ತೆಗೆದು ಕೊಳ್ಳಬೇಕು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಆಗಿರತಕ್ಕಂಥ ಉದ್ವಿಗ್ನ ಪರಿಸ್ಥಿತಿಯ ಹಿನ್ನಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಂದ ಹೇಳಿಕೆಯನ್ನು ಕೊಡಿಸಬೇಕು.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಉದ್ದೇಶವೇನು? ಯಾವುದೇ ಸಂಘಟನೆಯ ಹೋರಾಟವನ್ನು ಹತ್ತಿಕ್ಕತಕ್ಕಂಥ ಉದ್ದೇಶವನ್ನು ಸರ್ಕಾರ ಹೊಂದಿದೆಯೆ? ದಯಮಾಡಿ ಇದರ ಬಗ್ಗೆ ಸರ್ಕಾರದಿಂದ ಹೇಳಿಕೆಯನ್ನು ಕೊಡಿಸಬೇಕು. ಏಕೆಂದರೆ ಸರ್ಕಾರದವರು ಅಲ್ಲಿ law and order maintain ಮಾಡಬೇಕೆಂದಿದ್ದರೆ ಸರ್ಕಾರದಿಂದ ಸರಿಯಾದಂಥ ನಿಯೋಜನೆಯನ್ನು ಮಾಡಿಕೊಳ್ಳಬೇಕಿತ್ತು.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : Preventive measures ಎಲ್ಲವನ್ನು ತೆಗೆದುಕೊಂಡಿದ್ದೇವೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಅಲ್ಲಿ ಅಮಾಯಕರ ಮೇಲೆ ಕೇಸ್ ಗಳನ್ನು ಹಾಕಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಎಲ್ಲ ಗೌರವಾನ್ವಿತ ಸದಸ್ಯರುಗಳ ಭಾವನೆಗಳು ಇಲ್ಲೇನು ಈಗ ವ್ಯಕ್ತವಾಗಿದೆ ಇದನ್ನು ಆಧರಿಸಿ ಮತ್ತು ನಿನ್ನೆಯಿಂದ ಏನು ಘಟನೆಗಳು ನಡೆದಿವೆ ಅದರೆಲ್ಲದರ ಹಿನ್ನೆಲೆಯಲ್ಲಿ ಗೃಹ ಸಚಿವರು ಬಂದ ನಂತರ ಇದಕ್ಕೆ ಸಮಂಜಸವಾದ ಉತ್ತರವನ್ನು ಕೊಡಿಸಲಾಗುತ್ತದೆ. ಈಗ ಮೊದಲು ಪ್ರಶ್ನೋತ್ತರವನ್ನು ತಾವು ತೆಗೆದು ಕೊಳ್ಳಬೇಕೆಂದು ವಿನಂತಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಈಗ ರಾಜ್ಯದಲ್ಲಿ ಗಲಾಟೆಗಳು ಶುರವಾಗುತ್ತವೆ. ರಾಜ್ಯದ ಮೂಲೆ ಮೂಲೆಗಳಲ್ಲಿ ಗಲಾಟೆಗಳು ಶುರುವಾಗುತ್ತವೆ.

ಆದುದರಿಂದ ಇದು ಬಹಳ ಗಂಭೀರವಾದಂಥ ವಿಚಾರ. ಸಂಘಟನೆಯನ್ನು ಹತ್ತಿಕ್ಕತಕ್ಕಂಥ ಕೆಲಸವನ್ನು ಈ ಸರ್ಕಾರ ಮಾಡಿದೆ. ದಯಮಾಡಿ ಸರ್ಕಾರ ಇದರ ಬಗ್ಗೆ ಸದನದಲ್ಲಿ ಉತ್ತರ ಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇಲ್ಲಿ ಎರಡು ವಿಷಯಗಳಿವೆ, ಸದಾಶಿವ ಆಯೋಗದ ವರದಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬಹುದು.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮೊದಲನೆಯದಾಗಿ ಸದಾಶಿವ ಆಯೋಗದ ವರದಿಯನ್ನು ಸದನದಲ್ಲಿ ಮಂಡನೆ ಮಾಡಬೇಕು. ಎರಡನೆಯ ವಿಚಾರ ನಿನ್ನೆ ನಡೆದಿರತ್ತಕ್ಕಂಥ ಘಟನೆಯಲ್ಲಿ ನೀವು ನಡೆದುಕೊಂಡಿರತಕ್ಕಂಥ ರೀತಿ, ನೀವು ಅಮಾಯಕರ ಮೇಲೆ ಕೇಸ್‌ಗಳನ್ನು ಹಾಕಿ ಜೈಲಿಗೆ ಕಳುಹಿಸತಕ್ಕಂಥ ಪರಿಸ್ಥಿತಿಗೆ ತಂದರೆ ಅದು ಯಾವ ರೀತಿ ಸರಿ ಹೇಳಿ? ಮಾನ್ಯ ಅಧ್ಯಕ್ಷರೆ, ದಯಮಾಡಿ ಇದಕ್ಕೆ ಸರ್ಕಾರದಿಂದ ಉತ್ತರ ಕೊಡುವುದಕ್ಕೆ ಹೇಳಿ. ಇಷ್ಟೊಂದು ಗಲಾಟೆ ನಡೆಯುತ್ತಿದ್ದರೂ ಕೂಡ ಮಾನ್ಯ ಗೃಹ ಸಚಿವರು ಸದನಕ್ಕೆ ಸರಿಯಾದ ಉತ್ತರವನ್ನು ಕೊಡಲಿಲ್ಲ. ಸದನದ ದಾರಿ ತಪ್ಪಿಸಿದರು. ಅಲ್ಲಿ ಏನೂ ಆಗಿಲ್ಲ, ಎಲ್ಲರನ್ನೂ ಬಿಟ್ಟುಬಿಟ್ಟಿದ್ದೇವೆ, ಎಲ್ಲರೂ ಹೊರಟು ಹೋಗಿದ್ದಾರೆ, ಅಲ್ಲಿ ಏನೂ ಗಲಾಟೆ ನಡೆದಿಲ್ಲ ಎಂದು ಗೃಹ ಸಚಿವರು ಹೇಳಿದರು.

ಅಧ್ಯಕ್ಷರು : ಸರ್ಕಾರದಿಂದ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಿಯಮ 60 ರಡಿಯಲ್ಲಿ ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ ಕುರುಬರಹಳ್ಳಿ ಗ್ರಾಮದಲ್ಲಿ,,,

ಅಧ್ಯಕ್ಷರು : ಪ್ರಶ್ನೋತ್ತರ ಆದಮೇಲೆ ಪ್ರಸ್ತಾಪ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ : ಈಗ ಕೇವಲ ಪ್ರಸ್ತಾಪ ಮಾಡುತ್ತೇನೆ. ಪ್ರಶ್ನೋತ್ತರವಾದ ಮೇಲೆ ಈ ಬಗ್ಗೆ ಚರ್ಚೆಗೆ ಅವಕಾಶ ಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರಕ್ಕೂ ಮುಂಚೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಅವರು ಯಾವ

ನಿಯಮಾವಳಿಯಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿದೆ? ಇದು ಸರಿಯಾದ ಕ್ರಮವಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಆದ ತಕ್ಷಣ ನನಗೆ ಸಬ್‌ಮಿಟ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಆಯಿತು.

2. ಪ್ರಶ್ನೋತ್ತರ :

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ದೇವಾಲಯಗಳಿಗೆ ಅನುದಾನ ಬಿಡುಗಡೆ

76 (510) ಶ್ರೀ ಶ್ರೀನಿವಾಸ್. ಎಂ. (ಮಂಡ್ಯ) : ಮಾನ್ಯ ಮುಜರಾಯಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಮಂಡ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹಿಂದೂ ದೇವಾಲಯಗಳ ಸಂಖ್ಯೆ ಎಷ್ಟು; ಅವು ಯಾವುವು (ವಿವರ ನೀಡುವುದು)

ಆ) ಈ ಹಿಂದೂ ದೇವಾಲಯಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಇವುಗಳನ್ನು ದುರಸ್ಥಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಇದುವರೆವಿಗೂ ಮಂಡ್ಯ ವಿಧಾನಸಭಾ ಕ್ಷೇತ್ರಕ್ಕೆ ಮುಜರಾಯಿ ಇಲಾಖೆಯಿಂದ ದೇವಾಲಯಗಳ ಅಭಿವೃದ್ಧಿಗಾಗಿ ಬಿಡುಗಡೆಯಾಗಿರುವ ಅನುದಾನದ ಮೊತ್ತವೆಷ್ಟು (ವಿವರ ನೀಡುವುದು)

ಉ) ಸರ್ಕಾರ ಮುಜರಾಯಿ ಇಲಾಖೆಯಿಂದ ಈವರೆವಿಗೂ ಬಿಡುಗಡೆಗೊಳಿಸಿದ ಅನುದಾನವೆಷ್ಟು (ಕಳೆದ 3 ವರ್ಷಗಳ ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)